ಫ್ಲಮಿನಿಯಾ ಕೊಲೆಲ್ಲಾ
ಕವಿತೆಗಳು

# ಒಂಟಿ ಪಿಶಾಚಿ

ದೇವರ ಜೊತೆ ಒಂಟಿ ಪಿಶಾಚಿಯಾಗಿ
ಕೊನೆ ಉಸಿರೆಳೆಯುವುದಕ್ಕೆ ಅಂಜಿ ಅಳುಕುತ್ತೇನೆ ನಾನು
ನೀವಿದನ್ನ ಊರ ಹೊರಗೆ ಗೋಪುರದ ಮುಂದೆ ನಿಂತ
ಅಪರಿಚಿತ ಆಗಂತುಕರಿಗೆ ಕೂಗಿ ಕೂಗಿ ಹೇಳಿ

ಕಡಲ ಮೋಹಿಸುವ 'ಇಂದು' ಒಬ್ಬ ಮನುಷ್ಯ
ಮತ್ತವನು ಎಂಥವನೆಂದರೆ
ಹುಡುಕುತ್ತಾನೆ ಎಲ್ಲಾ ಚರಾಚರ ವಸ್ತುಗಳಲ್ಲಿ
ಎಲ್ಲಾ ಎಲ್ಲದರಲ್ಲಿ ತನ್ನ ಅಮ್ಮನದೇ ದನಿಯನ್ನ

ಬಹುದೊಡ್ಡ ನಷ್ಟದ ಉತ್ತರಾಧಿಕಾರಿಗಳು ನಾವು
ಅದಕ್ಕಾಗಿ ನನ್ನೆದೆಯ ರೊಟ್ಟಿಗಳನ್ನೇ ಎಡೆ ಇಡುವೆ
ಮತ್ತೆ ಎಣಿಸುವೆ ನಾನು ಅಣು ಕ್ಷಣಗಳ: ಎಂದೆಂದಿಗೂ,
ಒಂದು ಹೃದಯ ಬಡಿತವ
ಅನಂತಕಾಲದವರೆಗೆ ಮಿಡಿವ ಒಂದು ಹೃದಯ ಬಡಿತವ

ನಂತರ ಅಂತ್ಯ. ಅದನ್ನೂ ಕೂಡ ಗುರುತು ಮಾಡಿ
ತನ್ನ ಉಗುರುಗಳಿಂದ, ಪಿಸುಗುಡುತ್ತಾನೆ:
ಎಂದಿಗೂ ಬಾಯಿಬಿಡಬೇಡ, ಮತ್ತವನೇ ಹೇಳುತ್ತಾನೆ
ಕಿರುಚಿ ಹೇಳುತ್ತಾನೆ
ಶಹರದ ಜನನಿಬಿಡ ಮನೆಗಳ ಭೀತಿಯನ್ನ!

ಸಾಲಲೇ ಇಲ್ಲ ಯಾವುದಕ್ಕೂ ಪ್ರೀತಿ ಆರಂಭದಲಿ
ಸೂರ್ಯ ಮುಳುಗಿದ, ಸಪ್ತ ಸಾಗರಗಳ ರಮಿಸಿದ
ಬಚ್ಚಿಟ್ಟುಕೊಳ್ಳಲು ಮತ್ತು
ಬಚ್ಚಿಟ್ಟುಕೊಂಡವರನು ಹುಡುಕುಡ್ಲುಕಿ ತೆಗೆಯಲು
ಅಪರಿಮಿತ ಬೆಳಕೂ ಇರಲಿಲ್ಲ ಆದಿಯಲಿ

ಹೌದು! ಯಾವುದೂ ನಮ್ಮನ್ನು
ಅಷ್ಟು ವೇಗವಾಗಿ  ಸೆರೆ ಹಿಡಿಯಲಾರದು,
ರಾತ್ರಿಯ ಅಪವೇಳೆಯಲಿ ಭೂಮಿಗೆ ಇಳಿಯುವ ಅಪರಿಚಿತ
ಮುತ್ತಿನ ಹೊರತಾಗಿ?

# ಪ್ರತಿಭಟನೆ

ನೀನು ಪ್ರತಿಭಟಿಸಿದೆ
ಈಗಲೂ ಕೇಳಿಸುತ್ತಿದೆ
ಒಳದಾರಿಯ ಹುಡುಕಾಟದಲ್ಲಿ
ತಪ್ಪಿಸಿಕೊಳ್ಳುವ ಧಾವಂತದಲ್ಲಿ
ನಿನ್ನ ಹೃದಯವು ಮೂಕ ಬೀದಿಗಳಲ್ಲಿ
ದುಃಖಿಸಿ ದುಃಖಿಸಿ ಅಳುವುದ

ನಾನು ನಿನ್ನನ್ನು ಹೀಗೆ ಸಾಯಲು ಬಿಡಲಾರೆ
ಆದರೆ ನಿನ್ನನ್ನು ಹೀಗೆ
ಬದುಕಲೂ ಬಿಡಲಾರೆ

ನಿರಾಳತೆ ತುಂಬಿದ ಕಣ್ಣುಗಳಿಂದ
ನಾನು ಯಾವಾಗಲೂ
ನಿನ್ನನ್ನು ಎದುರುಗೊಂಡಿದ್ದೇನೆ

ಆದರೆ ಇಂದು ನೀನು
ನಿಧ ನಿಧಾನವಾಗಿ
ಕೊಳೆಯುತ್ತಾ ಹೋಗುವುದನ್ನೂ
ನಾನು ನೋಡುತ್ತಿದ್ದೇನೆ...

